Civil Misc No. 10/2023

ಪಿ.ಡಬ್ಲ್ಯೂ: 01 (Basamma)

ದಿನಾಂಕಃ 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ – ಶ್ರೀ R.R ವಕೀಲರಿಂದ.**

ಎದುರುದಾರರು ನನ್ನ ವಿರುದ್ದ ಅಸಲು ದಾವೆ ನಂಬರ 57/2019 ರಂತೆ ದಾವೆ ಹಾಕಿದ್ದಾರೆ ಎಂದರೆ ಹೌದು. ನಾನು ಸಹ ಅಸಲು ದಾವೆ ನಂಬರ 22/2022 ರಂತೆ ಎದುರುದಾರರು ವಿರುದ್ದ ದಾವೆ ಹಾಕಿದ್ದೇನೆ ಎಂದರೆ ಹೌದು. ಈ ಎರಡೂ ದಾವೆಗಳಲ್ಲಿ ನಾನು ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೆ. ಈ ಅರ್ಜಿಯಲ್ಲಿ ಒಳಗೊಂಡಿರುವ ಅಸಲು ದಾವೆ ಯಾವಾಗ ವಜಾಗೊಂಡಿದೆ ಎಂದು ನನಗೆ ತಿಳಿದು ಬಂತು ಎಂದರೆ ಸ್ವಲ್ಪ ದಿನಗಳಲ್ಲಿಯೇ ನನಗೆ ತಿಳಿಸಿದರು. ಈ ಅರ್ಜಿ ಸಲ್ಲಿಸಲು ವೈದ್ಯರ ಪ್ರಮಾಣ ಪತ್ರವನ್ನು ಪಡೆದುಕೊಂಡು ಬಂದಿದ್ದೇನೆ ಎಂದರೆ ಹೌದು. ಅದರಲ್ಲಿ ಅಸಲು ದಾವೆ ವಜಾಗೊಳ್ಳುವ 3 ದಿನ ಮೊದಲು ನಾನು ಚಿಕಿತ್ಸೆ ಪಡೆದಿದ್ದೇನೆ ಎಂದು ಬರೆದಿದೆ ಎಂದರೆ ಹೌದು. ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಕಾರಣ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ.**

**ಮರು ವಿಚಾರಣೆ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.